ಮೆಣಸು ಅಥವಾ ಜೀರಿಗೆ ಮೆಣಸು ಎಂಬ ಸಣ್ಣ ಮೆಣಸಿನ ಕಾಯಿಯ ಬಳಕೆ ಮಲೆನಾಡ ಪ್ರದೇಶಗಳಲ್ಲಿ ಹೆಚ್ಚು. ಸೂಜಿಯಂತೆ ಮೆಣಸಿನಕಾಯಿ ಸಣ್ಣದಿದ್ದರೂ ಖಾರ ಹೆಚ್ಚು. ಆದರೆ ಸ್ವಾದಿಷ್ಟ. ಆರೋಗ್ಯಕ್ಕೂ ಒಳ್ಳೆಯದು ಎಂದು ಹೇಳಲಾಗುತ್ತದೆ, ಸೂಜಿಯನ್ನು ಚುಚ್ಚಿದರೆ ಆಗುವಂತಹ ಉರಿ ಇಂತಹ ಸೂಜಿ ಮೆಣಸಿನಕಾಯಿ ಕಡಿದಾಗಲೂ ಆಗುವುದುಂಟು. ಅದೇ ರೀತಿ ಸೂಜಿಮಲ್ಲಿಗೆ, ಜಾಜಿಮಲ್ಲಿಗೆ ಎಂಬ ಚಿಕ್ಕಸೂಜಿ ಅಂತಹ ಎಸಳುಗಳ ಸುವಾಸನೆ ಭರಿತ ಮಲ್ಲಿಗೆ ಹೂ ತುಂಬಾ ಆಕರ್ಷಕ. ಮಹಿಳೆಯರ ಅಚ್ಚುಮೆಚ್ಚು. ಅಂತೆಯೇ '...ಅವಳ ನೋಟ ಸೂಜಿಯ ಮೊನೆಯಷ್ಟು ಹರಿತವಾಗಿದ್ದರೂ ಮೊಗ ಮಾತ್ರ ಕೆಂದಾವರೆ, ಮನಸ್ಸು ಮಲ್ಲಿಗೆ, ಮಾತು ಕಲ್ಲು ಸಕ್ಕರೆ...' ಎಂದು ವರ್ಣಿಸಿದ್ದುಂಟು. 'ಹೆಣ್ಣಿನ ಕುಡಿಗಣ್ಣ ನೋಟದಲ್ಲಿ ಕೋಟಿ ಅಲಂಕಾರ ಶಾಸ್ತ್ರ ಕೈಜೋಡಿಸಿ ನಿಂತಿವೆಯಂತೆ...' ಅದೆಲ್ಲ ಸೂಜಿಗಣ್ಣಿನ ಮಹಿಮೆ. ಆ ಕಣ್ಣುಗಳು ಸೂಜಿಗಲ್ಲು ಅಂದರೆ ಆಯಸ್ಕಾಂತ ಇದ್ದಂತೆ ಎಂದು ಹೇಳಲಾಗುತ್ತದೆ. ಆನಂದ ಕಂದರು ತಮ್ಮ ಒಂದು ಪದ್ಯದಲ್ಲಿ :

'...ಕಣ್ಣು ನುಂಗಿತು ಕಣ್ಣು ಅಲ್ಲೆ ನಿಮಿಷಾರ್ಧದಲ್ಲಿ
ಊರು ಕಟ್ಟಿತು ಪ್ರೇಮ...'

ಎಂದು ಹಾಡಿದ್ದಾರೆ.

ಕಣ್ಣು ಬಾಣದ ತೀಕ್ಷ್ಣತೆ ಸೂಜಿಯ ಮೊನೆಯ ಮೊನಚಿಗಿಂತ ತೀಕ್ಷ್ಣವಾದುದು ಎಂಬುದು ಇದರ ಇಂಗಿತಾರ್ಥ.

ಇದು ಪ್ರೇಮದ ಪರಿ ಆದರೆ,

'ಸೋಜುಗಾದ ಸೂಜಿ ಮಲ್ಲಿಗೆ ಮಾದೇವ ನಿಮ್ಮ
ಮಂಡೆ ಮ್ಯಾಲೆ ದುಂಡು ಮಲ್ಲಿಗೆ...'

ಎಂಬುದು ಭಕ್ತಿಭಾವದ ಪರಿ. ಸೂಜಿದಾರದ ಕೈಚಳಕದ ಮೂಲಕವೇ ನಾನಾತರಹದ, ನಾನಾ ಬಣ್ಣಗಳ ಹೂಹಾರಗಳು ತಯಾರಾಗಿ ಎಲ್ಲದಕ್ಕೂ ಬಳಕೆಯಾಗುವ ಪರಿ ಬೆರಗಿನದು. ನಿಮ್ಮ ಪಾದ ಕಮಲದಲಿ ಒಂದು ಸೂಜಿ ಮೊನೆಯಷ್ಟು ಸ್ಥಳ ನೀಡು ಗುರುರಾಯ... ಎಂದು ಅರ್ತನಾಗಿ ಬೇಡುವ ದಾಸರ ಪರಿ ಮತ್ತೊಂದು ತರಹ.

ಆದರೆ, ಇವೆಲ್ಲವುಗಳಿಗಿಂತ ವಿಭಿನ್ನವಾದುದು ಎಸ್. ಜಾನಕಿಯವರು ಹಾಡಿರುವ ಕವ್ವಾಲಿ ಸ್ವರೂಪದ ಹಳೆಯ ಕನ್ನಡ ಸಿನಿಮಾ ಗೀತೆ ಒಂದು ಬಹಳ ಮಾದಕವಾದುದು.

**'...ಸೂಜಿ ಹಿಂದೆ ದಾರಾದ್ದಾಂಗೆ ಕಾಂತದ್ದಿಂದೆ**
**ಲೋಹದ್ದಾಂಗೆ,**
**ಹೆಣ್ಣು ಹಿಂದೆ ಗಂಡು ನೋಡೂ ಬರುವ ಹಿಂದೆ**
**ಕುರಿಯ ಕುರಿಯ ಹಾಂಗೆ...'**

ಅದೊಂದು ವೇಶ್ಯಾಲೋಕದ ಗಂಡು- ಹೆಣ್ಣಿನ ವಿಭಿನ್ನ ರೀತಿಯ ಸಂಬಂಧ ಕುರಿತು ಚಿತ್ರಣ ನೀಡುವ ಮೋಹಕ ಗೀತೆ. ಆ ಲೋಕದಲ್ಲಿ ಠಳಾಯಿಸುವ ನಾಜೂಕಯ್ಯಗಳ ತಲೆಹಿಡುಕು ಕೆಲಸ ಸೂಜಿಯಲ್ಲಿ ದಾರ ಪೋಣಿಸಿದಂತೆ. ಮನುಷ್ಯಜೀವಿಯನ್ನು ಒಳಗೊಂಡು ಇಡೀ ಪ್ರಾಣಿಪ್ರಪಂಚದಲ್ಲಿ ಹೆಣ್ಣಿನ ಹಿಂದೆ ಗಂಡು ಹಿಂಬಾಲಿಸುವ ಪರಿ ಸೃಷ್ಟಿಕ್ರಿಯೆಯ ಅಪೂರ್ವ ಆಕರ್ಷಣೆ. ಮನುಷ್ಯ ಪ್ರಾಣಿಯದು ಅದಕ್ಕೂ ಮಿಗಿಲಾದ ಎಳೆತ ಸೆಳೆತ. ಅಂತೆಯೇ ಪ್ರಾಣಿ ಲೋಕದಲ್ಲಿ ಇರದ ವೇಶ್ಯಾವಾಟಿಕೆ ಅಂತಹ ವ್ಯವಸ್ಥೆಯೊಂದು ಮನುಷ್ಯ ಲೋಕದಲ್ಲಿ ಪ್ರಚಲಿತದಲ್ಲಿ ಇದೆ.

ಸೂಜಿ ಪೋಣಿಸಲು ಹೊಲಿಗೆ ಕಸುಬಿನಲ್ಲಿರುವವರು ಈಗ ಯಾಂತ್ರಿಕ ಉಪಾಯಗಳನ್ನು ಕೂಡ ಕಂಡುಕೊಂಡಿದ್ದಾರಂತೆ. ನೂರೆಂಟು ಬಗೆಯ ಸೂಜಿಗಳು, ನೂರೆಂಟು ಬಗೆಯ ಚಿತ್ತಾರದ ಕಲೆಗಳನ್ನು ಬಟ್ಟೆಗಳ ಮೇಲೆ ಚಿತ್ರಿಸುವ, ಹೊಲಿಯುವ ಯಂತ್ರಗಳು ಕೂಡ ಬಂದಿವೆ. ಅದಕ್ಕೊಂದು ಕಂಪ್ಯೂಟರ್ ನಿಯಂತ್ರಿತ ಸಾಫ್ಟ್‌ವೇರ್ ಕೂಡ ಬಂದು ಹೊಲಿಗೆಯ ಕಲೆ ವಿಸ್ತೃತಗೊಂಡಿದೆ. ಯಾಂತ್ರಿಕ ಬುದ್ಧಿಮತ್ತೆಯ ಆಗಮನದೊಂದಿಗೆ ಸೂಜಿದಾರದ ಕುಸುರಿ ಕೆಲಸ ಇನ್ನೂ ಅನೇಕ ನವರೂಪಗಳನ್ನು ತಾಳಬಹುದು. ಆದರೆ ಜಾತಿ ಧರ್ಮ, ಮೇಲು- ಕೀಳು, ದ್ವೇಷ ಅಸೂಯೆ, ಯುದ್ಧ, ಸಾವು- ನೋವು ಎಂಬ ಪೀಡೆಗಳನ್ನು ಅಳಿಸಿಹಾಕಿ, ಶಾಂತಿ- ಸಹಬಾಳ್ವೆ ಎಂಬ ಸೂಜಿಯಲ್ಲಿ, ಪ್ರೀತಿ ಪ್ರೇಮವೆಂಬ ದಾರವನ್ನು ಪೋಣಿಸಿ, ಇಡೀ ಮನುಕುಲವನ್ನು ಮಾನವೀಯತೆ ಎಂಬ ಹೊಲಿಗೆಯಿಂದ ಜೋಡಿಸುವ ಒಂದು ಎಐ ತಂತ್ರಜ್ಞಾನ ಬಳಕೆಯಲ್ಲಿ ಬರಬಹುದೇ ಎಂಬುದನ್ನು ಕಾದು ನೋಡಬೇಕಿದೆ.

●

